ಆ) ಹೌದಾದಲ್ಲಿ, ಸರ್ಕಾರದ ವಿಳಂಬ ನೀತಿಗೆ ಕಾರಣಗಳೇನು?

ಇ) ಸಿಬ್ಬಂದಿಯ ಕೊರತೆಯಿಂದಾಗಿ ಶಿಕ್ಷಣ ಸಂಸ್ಥೆಯನ್ನು ನಡೆಸಲು ತೊಂದರೆಯುಂಟಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಕೂಡಲೇ ಸಿಬ್ಬಂದಿ ನೇಮಕಾತಿಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಈ) ತರಬೇತಿ ಸಂಸ್ಥೆಗೆ ಕಟ್ಟಡ ನಿರ್ಮಾಣವನ್ನು ಯಾವಾಗ ಆರಂಭಿಸಲಾಗುವುದು? ಇದಕ್ಕಾಗಿ ಮಂಜೂರಾದ ಅನುದಾನವೆಷ್ಟು? (ವಿವರ ಒದಗಿಸುವುದು)

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು)

ಅ) ಹೌದು

ಆ) ಈಗಾಗಲೇ ಅಗತ್ಯ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ ಹಾಗೂ ಕಟ್ಟಡ ನಿರ್ಮಾಣಕ್ಕಾಗಿ ಪ್ರಸ್ತಕ ಸಾಲಿನಲ್ಲಿ ರೂ 125 00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ

ಇ) ಹೌದು ಈಗಾಗಲೇ ಅಗತ್ಯ ಸಿಬ್ಬಂದಿಯನ್ನು ನೇಮಕಾತಿ ಮಾಡಲಾಗಿದೆ

ಈ) ಪ್ರಸಕ್ತ ಸಾಲಿನಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ರೂ 125 00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ ಲೋಕೋಪಯೋಗಿ ಇಲಾಖೆ ಕ್ರಮ ವಹಿಸಬೇಕಾಗಿದೆ

623 (879) ಶ್ರೀ ರಘುಪತಿ ಭಟ್ ಕೆ (ಉಡುಪಿ) ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರವು 2000ನೇ ಇಸವಿಯಲ್ಲಿ ರಾಷ್ಟ್ರವ್ಯಾಪಿ "ಮನಿಸಾನ ವೇತನ" ಆಯೋಗದ ಶಿಫಾರಸ್ಸಿನ ಮೂಲಕ ಪತ್ರಕರ್ತರ ಮತ್ತು ಪತ್ರಕೇತರ ನೌಕರರ ವೇತನ ಪರಿಷ್ಕರಣೆಗೆ ಕ್ರಮ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹೌದಾದಲ್ಲಿ, ರಾಜ್ಯದ ಎಷ್ಟು ಪತ್ರಿಕಾ ಸಂಸ್ಥೆಗಳು ತಮ್ಮ ನೌಕರರಿಗೆ ಸದರಿ ವೇತನ ಪರಿಷ್ಕರಣಾ ಸೌಲಭ್ಯವನ್ನು ಜಾರಿಗೊಳಿಸಿವೆ?

ಇ) ಜಾರಿಗೊಳಿಸಲಾದ ಸಂಸ್ಥೆಗಳು ಯಾವುದು?

ಈ) ಮಣಿಪಾಲದ ಉದಯವಾಣಿ ಪತ್ರಿಕೆ ತನ್ನ ನೌಕರರಿಗೆ ಸದರಿ ಸೌಲಭ್ಯವನ್ನು ಜಾರಿಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಊ) ಹಾಗಿದ್ದಲ್ಲಿ, ಅಂತಹ ಸಂಸ್ಥೆಗಳ ವಿರುದ್ಧ ಕೈಗೊಂಡ ಕ್ರಮವೇನು ಹಾಗೂ ಈ ಬಗ್ಗೆ ಸರ್ಕಾರದ ನಿಲುವೇನು?

ಊ) ಪರಿಷ್ಕೃತ ವೇತನ ಸೌಲಭ್ಯವನ್ನು ಸಂಬಂಧಿಸಿದವರಿಗೆ ಜಾರಿಗೊಳಿಸುವ ಬಗ್ಗೆ 2003ರಲ್ಲಿ ಕಾರ್ಮಿಕ ಆಯುಕ್ತರ ನೇತೃತ್ವದಲ್ಲಿ ಸರ್ಕಾರ ನೇಮಿಸಿದ ಸಮಿತಿಯು ವರದಿಯನ್ನು ನೀಡಲಾಗಿದೆಯೇ?

ಋ) ಹಾಗಿದ್ದಲ್ಲಿ, ಈ ವರದಿಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು):

ಅ) ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ

ಆ) ಪೂರ್ತಿ ಜಾರಿಯಾಗಿರುವುದು – 36
ಭಾಗಶಃ ಜಾರಿಯಾಗಿರುವುದು – 30
ಒಟ್ಟು ಸಂಸ್ಥೆಗಳು – 66

ಇ) ಪಟ್ಟಿ ಲಗತ್ತಿಸಿದೆ

ಈ) ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ

ಉ) ಮನಿಸಾನ ವೇತನ ಮಂಡಳಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಕೇಂದ್ರ ಸರ್ಕಾರವು ದಿನಾಂಕ 5–12–2000 ಮತ್ತು 15–12–2000 ರಂದು ಹೊರಡಿಸಿದ್ದ ಆದೇಶಗಳನ್ನು ಉದಯವಾಣಿ ಪತ್ರಿಕಾ ಸಂಸ್ಥೆಯವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಸಂ 28588/2001ರಲ್ಲಿ ಪ್ರಶ್ನಿಸಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 1–2–2006 ರಂದು ಉದಯವಾಣಿ ಪತ್ರಿಕಾ ಸಂಸ್ಥೆಯವರ ರಿಟ್ ಅರ್ಜಿಯನ್ನು ಪುರಸ್ಕರಿಸಿ, ಕೇಂದ್ರ ಸರ್ಕಾರ ಹೊರಡಿಸಿದ್ದ ಆದೇಶಗಳನ್ನು ರದ್ದುಪಡಿಸಿರುತ್ತದೆ ಈ ವಿಷಯದಲ್ಲಿ ಉದಯವಾಣಿ ಪತ್ರಿಕಾ ಸಂಸ್ಥೆಗೆ ಸೂಕ್ತ ಅವಕಾಶವನ್ನು ಕೊಟ್ಟು, ಮನಿಸಾನ ವೇತನ ಮಂಡಳಿಯ ಶಿಫಾರಸ್ಸುಗಳನ್ನು ಜಾರಿಗೊಳಿಸುವ ವಿಷಯದಲ್ಲಿ ಮರು ವಿಚಾರಣೆ ನಡೆಸಿ ಸೂಕ್ತ ಆದೇಶವನ್ನು ಹೊರಡಿಸುವಂತೆ ಕೇಂದ್ರ ಸರ್ಕಾರಕ್ಕೆ ಆದೇಶವನ್ನು ಉಚ್ಚ ನ್ಯಾಯಾಲಯವು ನೀಡಿರುತ್ತದೆ

ಆದಕಾರಣ, ಈ ಬಗ್ಗೆ ವಿಷಯ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿ ಇರುವುದರಿಂದ, ಮನಿಸಾನ ವೇತನ ಮಂಡಳಿಯ ಶಿಫಾರಸ್ಸುಗಳನ್ನು ಈ ಸಂಸ್ಥೆಗೆ ಇದುವರೆಗೆ ಅನುಷ್ಠಾನಗೊಳಿಸಲು ಸಾಧ್ಯ ಆಗಿರುವುದಿಲ್ಲ

ಊ) ಮನಿಸಾನ ವೇತನ ಮಂಡಳಿಯ ವೇತನ ಸೌಲಭ್ಯಗಳನ್ನು ಜಾರಿಗೊಳಿಸುವ ಬಗ್ಗೆ ಕಾರ್ಮಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ತ್ರಿಪಕ್ಷೀಯ ಮಾನಿಟರಿಂಗ್ ಸಮಿತಿಯು ರಚನೆಯಾಗಿದ್ದು, 5 ಸಭೆಗಳನ್ನು ನಡೆಸಲಾಗಿರುತ್ತದೆ ಈ ಸಭೆಯಲ್ಲಿ ವೇತನ ಮಂಡಳಿಯ ಶಿಫಾರಸ್ಸುಗಳನ್ನು ಪತ್ರಿಕಾ ಸಂಸ್ಥೆಗಳು ಅನುಷ್ಠಾನ ಮಾಡುತ್ತಿರುವ ಬಗ್ಗೆ ಪರಿಶೀಲನೆ ಮಾಡಲಾಗಿರುತ್ತದೆ ವೇತನ ಜಾರಿಗೊಳಿಸುತ್ತಿರುವ ಬಗ್ಗೆ ಪರಿಶೀಲನೆ ಮಾಡಲು ಕೇಂದ್ರ ಸರ್ಕಾರದ ಆರ್ಥಿಕ ಸಲಹೆಗಾರರು, ಕಾರ್ಮಿಕ ಹಾಗೂ ಉದ್ಯೋಗ ಮಂತ್ರಾಲಯ, ನವದೆಹಲಿ ಇವರು ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪತ್ರಿಕಾ ಸಂಸ್ಥೆಗಳ ಹಾಗೂ ಕಾರ್ಮಿಕ ಸಂಘಗಳ ಸಭೆಯನ್ನು ನಡೆಸಲಾಯಿತು ವೇತನ ಮಂಡಳಿಯ ಶಿಫಾರಸ್ಸನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ತ್ರಿಪಕ್ಷೀಯ Monitoring ಸಮಿತಿಯ ಅಧ್ಯಕ್ಷತೆಯನ್ನು ಕಾರ್ಮಿಕ ಆಯುಕ್ತರ ಬದಲಾಗಿ ಮಾನ್ಯ ಕಾರ್ಮಿಕ ಸಚಿವರು ಅಧ್ಯಕ್ಷತೆಯನ್ನು ವಹಿಸಬೇಕೆಂದು ಹಾಗೂ ಇದರ ಬಗ್ಗೆ ರಾಜ್ಯ ಸರ್ಕಾರವು ಸರ್ಕಾರಿ ಆದೇಶವನ್ನು ಹೊರಡಿಸಬೇಕೆಂದು ಸೂಚಿಸಿದರು ಹಾಗೂ ವೇತನ ಸಮಿತಿಯ ಅನುಷ್ಠಾನದ ಬಗ್ಗೆ ಹೊಸ ನಮೂನೆಯಲ್ಲಿ ವಿವರಗಳನ್ನು ಪಡೆಯಬೇಕೆಂದು ತಿಳಿಸಿದರು

ಋ) ಮಾನ್ಯ ಕಾರ್ಮಿಕ ಸಚಿವರ ಅಧ್ಯಕ್ಷತೆಯಲ್ಲಿ ತ್ರಿಪಕ್ಷೀಯ ಒಳ ಸಮಿತಿಯನ್ನು ರಚಿಸಲಾಗಿದೆ ಈ ಸಮಿತಿಯಲ್ಲಿ ಆಡಳಿತವರ್ಗ ಮತ್ತು ಕಾರ್ಮಿಕ ಸಂಘದ ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ ಕೇಂದ್ರ ಸರ್ಕಾರದ ಆರ್ಥಿಕ ಸಲಹೆಗಾರರ ಸೂಚನೆಯನ್ವಯ ನಿಗದಿಪಡಿಸಿದ ಹೊಸ ನಮೂನೆಯಲ್ಲಿ ವಿವರಗಳನ್ನು ಪಡೆಯಲಾಗುತ್ತಿದೆ

ಅನುಬಂಧ – 1

ಕ್ರ ಸಂ	ಪತ್ರಿಕಾ ಸಂಸ್ಥೆಗಳ ಹೆಸರು	ನಗರ	ಕಾರ್ಮಿಕರ ಸಂಖ್ಯೆ	ಪೂರ್ತಿ ಮತ್ತು ಭಾಗಶಃ ಜಾರಿಯಾಗಿರುವುದು
1	ಮೇ ಈ ಸಂಜೆ ದಿನಪತ್ರಿಕೆ, ಸಂ 2/4, ಡಾ ರಾಜ್ ಕುಮಾರ್ ರಸ್ತೆ,	ಬೆಂಗಳೂರು	78	F I
2	ಅಭಿಮಾನಿ ಪ್ರಕಾಶನ, ನಂ 2/4 ಡಾ ರಾಜ್‌ಕುಮಾರ್ ರಸ್ತೆ,	"	23	F I
	ಬೆಂಗಳೂರು			

3	ರಾಜಾಸ್ಥಾನ ಪತ್ರಿಕೆ(ಪ್ರೈ)ಲಿ, ನಂ 50/11, 2ನೇ ಮುಖ್ಯ ರಸ್ತೆ ಇಂಡಸ್ಟ್ರಿಯಲ್ ಟೌನ್, ರಾಜಾಜಿನಗರ ಬೆಂಗಳೂರು	"	14	P I
4	ಮನುಕುಲ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಪ್ರೈ ಲಿ ಡಾ ಎಂ ಸಿ ಮೋದಿ ರಸ್ತೆ, ವೆಸ್ಟ್ ಆಫ್ ಕಾರ್ಡ್‌ರೋಡ್ ಬೆಂಗಳೂರು	"	14	P I
5	ದ ಪ್ರಿಂಟರ್ಸ್ (ಮೈಸೂರು) (ಪ್ರೈ)ಲಿ, ನಂ 7212, ಕುಂಬಳಗೋಡು, ಇಂಡಸ್ಟ್ರೀಯಲ್ ಎಸ್ಟೇಟ್, ಬೆಂಗಳೂರು–74	"	252	F I
6	ಕನ್ನಡ ಪ್ರಭ, ಇಂಡಿಯನ್ ಎಕ್ಸ್‌ಪ್ರೆಸ್	"	450	F I
7	ದ ಹಿಂದು	"	123	F I
8	ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ	"	782	F I
9	ಸಂಯುಕ್ತ ಕರ್ನಾಟಕ ಬೆಂಗಳೂರು	"	155	F I
10	ಟೈಮ್ಸ್ ಆಫ್ ಇಂಡಿಯಾ, ಬೆಂಗಳೂರು	"	161	F I
11	ಸಂಯುಕ್ತ ಕರ್ನಾಟಕ, ಕೋಪಿಕರ್ ರಸ್ತೆ ಹುಬ್ಬಳ್ಳಿ	ಹುಬ್ಬಳ್ಳಿ	189	F I
12	ವಿಜಯ ಕರ್ನಾಟಕ, ಹುಬ್ಬಳ್ಳಿ	"	100	F I
13	ವಿಜಯ ಟ್ರೈಮ್ಸ್ ಹುಬ್ಬಳ್ಳಿ	"	60	F I

14	ಉಷಾ ಕಿರಣ್, ಹುಬ್ಬಳ್ಳಿ	"	50	F I
15	ಪ್ರಜಾವಾಣಿ	"	72	F I
16	ಡೆಕ್ಕನ್ ಹೆರಾಲ್ಡ್, ಹುಬ್ಬಳ್ಳಿ	"	70	F I
17	ಸಂಜೆ ದರ್ಪಣ	"	20	F I
18	ವಿಶ್ವವಾಣಿ	"	2	F I
19	ವಿಶ್ವವಿಜಯ್	"	2	F I
20	ನವೋದಯ ಕನ್ನಡ ಡೈಲಿ	"	2	F I
21	ವಿಜಯ ಕರ್ನಾಟಕ	ಮಂಗಳೂರು	58	P I
22	ಪ್ರಜಾವಾಣಿ	"	27	P I
23	ದ ಹಿಂದು	"	51	P I
24	ವಿಜಯಾನಂದ ಪ್ರಿಂಟರ್ಸ್	ಶಿವಮೊಗ್ಗ	60	P I
25	ಕನ್ನಡ ಪ್ರಭ	"	30	P I
26	ಉಷಾ ಕಿರಣ್	"	12	P I
27	ಹೊಸ ದಿಗಂತ	"	44	P I
28	ಪ್ರಜಾವಾಣಿ	ದಾವಣಗೆರೆ	21	F I
29	ಸಂಯುಕ್ತ ಕರ್ನಾಟಕ	"	12	F I
30	ಜನತಾ ವಾಣಿ	"	15	F I
31	ನಗರವಾಣಿ	"	6	F I
32	ವಿಜಯ ಕರ್ನಾಟಕ ಗ್ರೂಪ್	ಚಿತ್ರದುರ್ಗ	36	F I
33	ಲೋಕಸೈಲ್ ದಿನಪತ್ರಿಕೆ	ರಾಯಚೂರು	10	F I
34	ಸಮಾಜ ವಿಕಾಸ	"	35	F I
35	ಸುದ್ಧಿಮಾಲ್, ಪಬ್ಲಿಷರ್ ಇಂಡಿಯಾ ಲಿಮಿಟೆಡ್	"	32	F I

36	ವಾಣಿ ಸಮಾಜ್ಯ ಕನ್ನಡ ಡೈರಿ	"	6	F I
37	ವೃತ್ತ ಮಂಜರಿ, ಹಿಂದಿ ವೃತ್ತ ಪತ್ರಿಕೆ	"	7	F I
38	ವಿಜಯ ಕರ್ನಾಟಕ	ಗಂಗಾವತಿ	27	F I
39	ನಾಗರೀಕ ದಿನಪತ್ರಿಕೆ	ಕೊಪ್ಪಳ	7	F I
40	ಪ್ರಜಾ ಪ್ರಪಂಚ	ಗಂಗಾವತಿ	3	F I
41	ಹಾಸನ ಮಾಧ್ಯಮ,	ಹಾಸನ	4	F I
42	ಜನತಾ ಮಾಧ್ಯಮ	"	8	P I
43	ಪ್ರತಿನಿಧಿ	"	4	P I
44	ಮಾರ್ಗ ಪ್ರಭ	"	2	P I
45	ಹಾಸನ ಮಿತ್ರ	"	2	P I
46	ವಿಜಯ ಕರ್ನಾಟಕ	"	47	P I
47	ಮಲ್ನಾಡು ಕೂಗು	"	2	P I
48	ಜ್ಞಾನದೀಪ	"	2	P I
49	ನಾಡ ಸಹ್ಯಾದ್ರಿ	"	2	P I
50	ಜನಮಿತ್ರ	ಚಿಕ್ಕಮಗಳೂರು	3	P I
51	ಗಿರಿ ವಾರ್ತೆ	"	2	P I
52	ಕಾಂಪ್ಲೆಂಟ್ ನ್ಯೂಸ್	ಹಾಸನ	2	F I
53	ಮಾರ್ಗ ಪ್ರಭ	ಬೇಲೂರು	2	F I
54	ಮಲ್ನಾಡು ಸಂಗಾತಿ	ಹಾಸನ	2	P I
55	ಸುದ್ದಿ ಮಾಧ್ಯಮ	"	2	P I
56	ಮಲ್ನಾಡು ನಕ್ಷತ್ರ	"	2	P I
57	ಹೊಸ ಅಧ್ಯಾಯ	"	2	P I

58	ಶಕ್ತಿ ನ್ಯೂಸ್	ಕೊಡುಗು	4	P I
59	ಕನ್ನಡಮ್ಮ	ಬೆಳಗಾಂ	37	P I
60	ತರುಣ್ ಭಾರತ್	"	77	P I
61	ಡೈಲಿ ವಾರ್ತಾ	"	25	P I
62	ರನ್‌ಜುನ್ ಜಾರ್	"	31	P I
63	ಎಸ್‌ಎಡಿ	ಬಾಗಲಕೋಟಿ	6	P I
64	ಸತ್ಯಾಶ್ರಯ	"	5	P I
65	ವಿದ್ಯಮಾನ್	"	12	P I
66	ವಿಜಯ ಕರ್ನಾಟಕ	"	34	F I

624 (535) ಶ್ರೀ ರಾಜೇಂದ್ರನ್ ಎಸ್. (ಕೆ ಜಿ ಎಫ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ ಜಿ ಎಫ್ ಮತ ಕ್ಷೇತ್ರದಲ್ಲಿ ಪ್ರಸ್ತಕ ವರ್ಷ ಮೊರಾರ್ಜಿ ವಸತಿ ಶಾಲೆಗೆ ಸ್ವಂತ ಕಟ್ಟಡ ಮಂಜೂರು ಮಾಡಲಾಗಿದೆಯೇ?

ಆ) ಹಾಗಿದ್ದಲ್ಲಿ ಇದರ ಕಾರ್ಯಾರಂಭ ಯಾವಾಗ ಮತ್ತು ಮಂಜೂರಾದ ಹಣ ಎಷ್ಟು?

ಶ್ರೀ ಬಾಲಚಂದ್ರ ಲ ಜಾರಕಿ ಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) ಕೆ ಜಿ ಎಫ್ ನಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲಾ ಸಂಕೀರ್ಣದ ನಿರ್ಮಾಣ ಮಾಡಲು ದಿ 10–1–2007 ರಲ್ಲಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿದೆ ಗುತ್ತಿಗೆದಾರರು ಸದ್ಯದಲ್ಲೇ ಕಾಮಗಾರಿಯನ್ನು ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಂಡಿರುತ್ತಾರೆ

ಈ ಕಾಮಗಾರಿಯ ಅನುಮೋದಿತ ಅಂದಾಜು ವೆಚ್ಚವು ರೂ 305 69 ಲಕ್ಷಗಳಾಗಿವೆ